(SRI B. D. JATTI)

clearance certificate. Otherwise it is not possible to do anything.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಉತ್ತರದಲ್ಲಿ ಹೇಳಿರುವಂತೆ ವಿಧಾನ ಸಭೆಯ ಹದಿನೈದು ಜನ ಸದಸ್ಯರು ಸಹಿ ಹಾಕಿದ್ದಾರೆ ಎಂದು ಹೇಳಿದ್ದೀರಲ್ಲ, ಇದರಲ್ಲಿ ವಿರೋಧ ಪಕ್ಷದವರು ಅಥವಾ ಇನ್ನಿತರ ಪಕ್ಷದವರು ಯಾರು ಎನ್ನುವುದೇ ಗೊತ್ತಾಗುವುದಿಲ್ಲ. ಎರಡು ಪಕ್ಷದವರೂ ಸೇರಿ ಕೊಟ್ಟಿದ್ದಾರೆಯೇ? ಹಾಗಿದ್ದರೆ ಅವರುಗಳ ಹೆಸರುಗಳೇನು?

ಶ್ರೀ ಬಿ. ಡಿ. ಜತ್ತಿ.—ಎಲ್ಲ ಪಕ್ಷದವರೂ ಇದ್ದಾರೆ. ಹೆಸರುಗಳು ಈ ರೀತಿ ಇವೆ.

ಶ್ರೀಯುತರಾದ—

| | | | |
|---|---|---|---|
| 1 | ಎ. ಆರ್. ಕರಿಸಿದ್ದಪ್ಪ, | M.L.A. | ಅರಸೀಕೆರೆ |
| 2 | ದ್ಯಾವಮ್ಮ, ಮಂಜಪ್ಪ | ,, | ಗಂಡಸಿ |
| 3 | ಬಿ. ಎನ್. ಬೋರಣ್ಣ ಗೌಡ | ,, | ಬೇಲೂರು |
| 4 | ವೈ. ಮಂಜಯ್ಯ ಶೆಟ್ಟಿ | ,, | ಬೈಂದೂರು |
| 5 | ಬಿ. ಆರ್. ಕಾರ್ಕಳ | ,, | ಸುರತ್ಕಲ್ |
| 6 | ಬಿ. ಜಗಜೀವನದಾಸ್ ಶೆಟ್ಟಿ | ,, | ಬ್ರಹ್ಮಾವರ |
| 7 | ವಿ. ಶ್ರೀನಿವಾಸ ಶೆಟ್ಟಿ | ,, | ಕುಂದಾಪುರ |
| 8 | ಮಂಜಪ್ಪ ಉಲ್ಲಾಳ್ | ,, | ಕಾರ್ಕಳ (ನಿಮ್ನವರ್ಗ) |
| 9 | ಡಾ॥ ಕೆ. ನಾಗಪ್ಪ ಆಳ್ವ | ,, | ಪನೆಮಂಗಳೂರು |
| 10 | ಯು. ಎಸ್. ನಾಯಕ | ,, | ಉಡುಪಿ |
| 11 | ಎಸ್. ನುಬ್ಬಯ್ಯ ನಾಯಕ್ | ,, | ಪುತ್ತೂರು (ನಿಮ್ನವರ್ಗ) |
| 12 | ಹೆಚ್. ಕೆ. ಸಿದ್ದಯ್ಯ | ,, | ಬೇಲೂರು |
| 13 | ಕೆ. ವೆಂಕಟರಮಣ ಗೌಡ | ,, | ಪುತ್ತೂರು |
| 14 | ಕೆ. ಟಿ. ದಾನಪ್ಪ | ,, | ಹಾಸನ |
| 15 | ಕೆ. ಕೆ. ಶೆಟ್ಟಿ, | M.L.C. | ಕೋಲಾರ |

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಬೆಂಗಳೂರಿನಿಂದ ಅರಸೀಕೆರೆಯ ಮಾರ್ಗವಾಗಿ ಉಡುಪಿಗೆ ಬಸ್ಸನ್ನು ಹೋಗುವಂತೆ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಬಿ. ಡಿ. ಜತ್ತಿ.—ಇದುವರೆಗೆ ಸಾಧ್ಯವಾಗಿಲ್ಲ.

ಶ್ರೀ ಎನ್. ಜಿ. ನರಸಿಂಹೇ ಗೌಡ.—ಹಾಸನು ಡಿಸ್ಪೆನ್ಸರಿಯಲ್ಲಿ ಒಂದು ಡಿಪೋವನ್ನು ತೆಗೆಯಬೇಕ ಎಂದು ಒಂದು ವರ್ಷದ ಹಿಂದೆಯೇ ಆರ್ಡರಾಗಿದ್ದರೂ ಇನ್ನೂ ತೆಗೆದಿಲ್ಲ. ಇದನ್ನು ಯಾವಾಗ ತೆಗೆಯುತ್ತೀರಿ? ಮತ್ತು ಹಾಸನದ ರೋಡುಗಳನ್ನು ನ್ಯಾಷನಲೈಸು ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನು ಯಾವಾಗ ಮಾಡುತ್ತೀರಿ?

ಶ್ರೀ ಬಿ. ಡಿ. ಜತ್ತಿ.—ಈಗಾಗಲೇ ಪರ್ಮಿಷನ್ನಿಗಾಗಿ ಅಪ್ಲೈ ಮಾಡಿದ್ದೇವೆ. ಅದು ಸಿಕ್ಕಿದ ನಂತರ ರೋಡುಗಳನ್ನು ತೆಗೆದುಕೊಳ್ಳಬೇಕೆಂದು according to programme ನಾವು ಈಗಾಗಲೇ ನೋಟಿಫಿಕೇಷನ್ನನ್ನು ಕೂಡ ಕೊಟ್ಟಿದ್ದೇವೆ. ಆದೂ ತಮಗೆ ಗೊತ್ತಿರಬಹುದು.

## Need for a High School in Dudda Hobli, Hassan Taluk.

*Q.—572. Smt. DYAVAMMA (Gandasi).—

Will the Government be pleased to state.—

(*a*) the number of Primary and Middle Schools in Dudda Hobli, Hassan Taluk, together with the number of pupils both boys and girls (separate figures for boys and girls may be furnished);

(*b*) the average number of pupils both boys and girls who have passed out of Middle Schools in the above Hobli during the year 1957-58;

(*c*) whether it has come to their notice that three-fourth of students both boys and girls who have passed out of Middle Schools in that Hobli every year have discontinued their further studies for want of a High School?

*A.*—Sri ANNA RAO GANAMUKHI (Minister for Education).—

(*a*)—

| | | Boys. | Girls. |
|---|---|---|---|
| Primary Schools | 53 | 2,020 | 1,551 |
| Middle Schools (incuding NTM Schools.) | 4 | 535 | 23) |

(*b*) Boys ... 53
Girls ... 8

(*c*) No.

ಶ್ರೀಮತಿ ದ್ಯಾವಮ್ಮ.—ಹಾಸನ ತಾಲ್ಲೂಕು ಕೇಂದ್ರುಕ್ಕೂ ದುದ್ದಕ್ಕೂ ಹತ್ತು ಮೈಲಿ ಆಗುತ್ತದೆಂಬುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ನನಗೆ ಗೊತ್ತಿಲ್ಲ.

ಶ್ರೀಮತಿ ದ್ಯಾವಮ್ಮ.—ಈ ಹೋಬಳಿಗೆ ಹೈಸ್ಕೂಲು ಅವಶ್ಯಕತೆ ಇರುವುದು ತಮ್ಮ ಇಲಾಖೆಯವರ ಯೋಜನೆಯಲ್ಲಿ ಸೇರಿಲ್ಲವೇ?

ಶ್ರೀ ಅಣ್ಣಾರಾವ್ ಗಣಮುಖಿ.—ಯೋಜನೆಯಲ್ಲಿ ಸೇರಿದೆ. ಖಾಸಗಿಯವರು ಒಂದು ಶಾಲೆ ತೆಗೆಯುತ್ತೇವೆಂದು ಹೇಳಿದರೆ, ಸರ್ಕಾರದವರು ಸಹಾಯ ಮಾಡುತ್ತಾರೆ.

ಶ್ರೀಮತಿ ದ್ಯಾವಮ್ಮ.—ಹಾಗಾದರೆ ಅಲ್ಲಿಗೆ ಹೈಸ್ಕೂಲನ್ನು ಕೊಡುತ್ತೀರೋ.

ಶ್ರೀ ಅಣ್ಣಾರಾವ್ ಗಣಮುಖಿ.—ಯಾರಾದರೂ ಹೈಸ್ಕೂಲನ್ನು ತೆರೆಯುತ್ತೇವೆಂದರೆ ಹೈಸ್ಕೂಲು ಕೊಡುತ್ತೇವೆ.